**ಪಾಠ 10** **ಡಿಸೆಂಬರ್ 1–7**

## ಐಕ್ಯತೆ ಮತ್ತು ಒಡೆದ ಸಂಬಂಧಗಳು



### ಸಬ್ಬತ್ತಿನ ಮಧ್ಯಾಹ್ನ

**ಈ ವಾರದ ಅಧ್ಯಾಯನಕ್ಕಾಗಿ ಓದಿರಿ: 2ತಿಮೊ 4:11, ಫಿಲೆಮೋನ್ 1:25, 2ಕೊರಿಂಥ 10:12–15, ರೋಮಾ 5:8–11, ಎಫೆಸ 4:26, ಮತ್ತಾಯ 18:15–17**

.

**ಸ್ಮರಣ ವಾಕ್ಯ: ದೇವರಿಗೆ ವೈರಿಗಳಾಗಿದ್ದ ನಾವು ಆತನೊಂದಿಗೆ ಸಮಾಧಾನವಾಗಿರಲಾಗಿ ಆತನ ಕೂಡ ಸಮಾಧಾನವಾದ ನಮಗೆ ಆ ಮಗನಿಗಿರುವ ಜೀವದಿಂದ ರಕ್ಷಣೆಯಾಗುವುದು ಮತ್ತು ನಿಶ್ಚಯವಲ್ಲವೇ. ರೋಮಾಪುರ 5:10**

ನಾವು ನೋಡಿರುವ ಹಾಗೆ ಪಂಚಾಶತ್ತಮವಾದ ಮೇಲೆ ನಂಬಿಗಸ್ತರ ಸಂಬಂಧವು ಕೆಲವೊಮ್ಮೆ ಸಭೆಯ ನಾಯಕರು ಮತ್ತು ಪ್ರತಿಯೊಬ್ಬ ಸಭಿಕರು ಇಂಥ ಸಮಸ್ಯಗಳು ಎದುರಾದಾಗ ಹೇಗೆ ನಿಭಾಯಿಸುತ್ತಿದ್ದರು ಎಂಬುದರ ಉದಾರಣೆಗಳನ್ನು ಹೊಸ ಒಡಂಬಡಿಕೆಯಲ್ಲಿ ತಿಳಿಸಲಾಗಿದೆ/ಬರೆದಿದೆ. ತತ್ವಗಳು ಇಂದು ನಮ್ಮ ಸಭೆಗಳಿಗೆ ಅಮೂಲ್ಯವಾದವುಗಳು. ಸತ್ಯವೇದದ ತತ್ವಗಳನ್ನು ಉಪಯೊಗಿಸಿ ವಿವಾದಗಳನ್ನು ಬಗೆಹರಿಸಿ ಕ್ರಿಸ್ತನಲ್ಲಿ ಐಕ್ಯತೆಯನ್ನು ಕಾಪಾಡಿಕೊಳ್ಳಲು, ಈ ತತ್ವಗಳಿಂದ ಸತಾರಾತ್ಮಕ ಫಲಿತಾಂಶವು ಬರುತ್ತಿತ್ತು.

ಈ ವಾರದ ಪಾಠದಲ್ಲಿ ಪುನಃಸ್ಥಾಪಿತ ಸಂಬಂಧಗಳು ಮತ್ತು ಮಾನವ ಸಂಬಂಧಗಳು ಕ್ರಿಸ್ತನಲ್ಲಿದ್ದ ಐಕ್ಯತೆ ಮೇಲೆ ಹೇಗೆ ಪ್ರಭಾವ ಬೀರುತ್ತವೆ ಎಂಬುದರ ಮೇಲೆ

ದೃಷ್ಟಿ ಹರಿಯೋಣ. ಪವಿತ್ರಾತ್ಮನ ಸೇವೆಯು ಜನರನ್ನು ದೇವರ ಹತ್ತಿರಕ್ಕೆ ತರುವುದು ಮತ್ತು ಎಲ್ಲರನ್ನೂ ಒಂದುಗೂಡಿಸುವದನ್ನು ಒಳಗೊಂಡಿದೆ. ದೇವರೊಂದಿಗಿನ ನಮ್ಮ ಸಂಬಂಧಕ್ಕೆ ಅಡೆತಡೆಗಳನ್ನು ತೆಗೆಹಾಕುವುದು, ಅದಲ್ಲದೆ ನಮ್ಮ ಮಾತು ಮತ್ತೊಬ್ಬರೊಂದಿಗೆ ಸಂಬಂಧಕ್ಕೆ ಇರುವ ಅಡೆತಡೆಗಳನ್ನು ತೆಗೆದುಹಾಕುವ ಕೆಲಸವು ಸಹ ಪವಿತ್ರಾತ್ಮನದಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ. ಸಭೆಯು ಏನು ಹೇಳುತ್ತದೆ ಎಂಬುದಲ್ಲ, ಆದರೆ ಸಭೆಯು ಹೇಗೆ ಜೀವಿಸುತ್ತದೆ ಇದು ಸುವಾರ್ಥೆಯ ಶಕ್ತಿಯನ್ನು ಪ್ರದರ್ಶೀಸುವಂಥದ್ದಾಗಿದೆ. ನಮ್ಮೊಳಗೆ ಒಬ್ಬರ ಮೇಲೊಬ್ಬರಿಗೆ ಪ್ರೀತಿಯಿದ್ದರೆ ಎಲ್ಲರೂ ನಿಮ್ಮನ್ನು ನನ್ ಶಿಷ್ಯರೆಂದು ತಿಳಿಕೊಳ್ಳುವರು (ಯೋಹಾನ 13:35). ಈ ಪ್ರೀತಿ ಇಲದಿದ್ದರೆ ನಾವು ಸಭೆಯ ಐಕ್ಯತೆ ಬಗ್ಗೆ ಹೇಳುವುದು ಪ್ರಯೋಜನವಿಲ್ಲ.

**ಬಾನುವಾರ** **ಡಿಸೆಂಬರ್ 2**

**ಪುನಃಸ್ಥಾಪಿತ ಗೆಳೆತನ**

ಪೌಲನು ಮತ್ತು ಬಾರ್ನಬನು ಜೊತೆಗೂಡಿ ಯೇಸುವಿನ ಸಾಕ್ಷಿಗಳಾಗಿದ್ದರು. ಆದರೆ ಮಾರ್ಕನೆಸಿಕೊಳ್ಳುವ ಯೋಹಾನನ್ನು ನಂಬಬೇಕೋ ಅಥವಾ ಬೇಡವೋ ಎಂಬುದರ ಬಗ್ಗೆ ಅವರು ಒಪ್ಪಲಿಲ್ಲ(ಅ.ಕೃ 15:36–39) ಸುವಾರ್ತೆ ಸಾರುವ ವೇಳೆ ಮಾರ್ಕನೆಸಿಕೊಳ್ಳುವ ಯೋಹಾನನಿಗೆ ಆದ ತೊಂದರೆಗಳಿಂದ ಅವನು ಪೌಲನು ಮತ್ತು ಬಾರ್ನಬನನ್ನು ಬಿಟ್ಟು ಮನೆಗೆ ಹಿಂದಿರುಗಿದನು(ಅ.ಕೃ 13:13).

ಯೋಹಾನನ್ನು ಬಿಟ್ಟು ಹೋದ ಕಾರಣ ಪೌಲನು ಅವನು ಉಪಯುಕ್ತವಲ್ಲವೆಂದು ತೀರ್ಮಾನಿಸಿ ಕೆಲಕಾಲ ನಿಷ್ಠುರನಾದನು ಅವನಿಗಿದ್ದ ಅನುಭವದಿಂದಾಗಿ ಪೌಲನು ಅವನನ್ನು ಕ್ಷಮಿಸಿದನು. ಮಾರ್ಕನು ಈ ಸುವಾರ್ತೆ ಸೇವೆ ಮಾಡುವುದನ್ನು ಬಿಡಬಾರದೆಂದು ಯಾಕೆಂದರೆ ಅವನಲ್ಲಿ ಅರ್ಹತೆ ಇದ್ದ ಕಾರಣ ಅವನು ಕ್ರಿಸ್ತನಿಗಾಗಿ ಕೆಲಸ ಮಾಡುವುದರಲ್ಲಿ ಉಪಯುಕ್ತವೆಂದು ಪೌಲನು ತಿಳಿದನು. ಎಲ್ಲೆನ್ ಜಿ ವೈಟ್ "ದಿ ಆಕ್ಟ್ಸ್ ಆಫ್ ದಿ ಅಪೊಸ್ಟಲ್ಸ್ ಪು.170

ದೇವರು ಇವರೆಲ್ಲರನ್ನೂ ಸೇವೆಗಾಗಿ ಉಪಯೋಗಿಸಿಕೊಂಡರೂ ಅವರ ಮಧ್ಯದಲ್ಲಿದ್ದ ಸಮಸ್ಯೆಗಳಿಗೆ ತೀರ್ಮಾನ ತೆಗೆದುಕೊಳ್ಳಬೇಕಾಗಿತ್ತು. ಅಪೊಸ್ತಲನು ಕೃಪೆಯ ಬಗ್ಗೆ ಸುವಾರ್ತೆ ಸಾರಿದನು. ತನ್ನನ್ನು ನಿರಾಸೆಗೊಳಿಸಿದ ಯೌವನಸ್ತ ಬೋಧಕರಿಗೆ ಕೃಪೆಯನ್ನು ತೋರಿಸಬೇಕಿತ್ತು. ಕ್ಷಮಿಸುವಂಥ ಅಪೊಸ್ತಲರು ಕ್ಷಮಿಸಬೇಕಿತ್ತು. ಮಾರ್ಕನೆಸಿಕೊಳ್ಳುವ ಯೋಹಾನನನ್ನು ಸುವಾರ್ತೆ ಸೇವೆಯಲ್ಲಿ ಬಾರ್ನಬನು ಬೆಳೆಸಿದನು(ಅ.ಕೃ 15:39). ಹಾಗಾಗಿ ಬದಲಾವಣೆಗಳು ಪೌಲನ

ಹೃದಯವನ್ನು ಸಹಜವಾಗಿ ತಟ್ಟಿದವು.

**ತಿಮೊಥಿಗೆ ಮತ್ತು ಕೊಲೊಸ್ಸೆಯ ಸಭೆಗೆ ಪೌಲನು ಬರೆದ ಪತ್ರವು ಯೋಹಾನನೆನಿಸಿಕೊಳ್ಳುವ ಆತ್ಮವಿಶ್ವಾಸ ತುಂಬುವ ಬಗ್ಗೆ ಏನನ್ನು ತಿಳಿಸುತ್ತದೆ. ಕೊಲೊಸ್ಸೆ** 4:10, 11:2, **ತಿಮೊ** 4:11.

____________________________________________

____________________________________________

ಪೌಲನು ಮಾರ್ಕನೆನಿಸಿಕೊಳ್ಳುವ ಯೋಹಾನನೊಂದಿಗೆ ಮರುಮೈತ್ರಿಯ ಬಗ್ಗೆ ಸ್ಪಷ್ಟವಾಗಿ ಸತ್ಯವೇದದಲ್ಲಿ ತಿಳಿಸಲಾಗಿದೆ. ಯೋಹಾನ ಅಪೊಸ್ತಲರ ನಂಬಿಗಸ್ತ ಜೊತೆಗಾನಾದನು. ಪೌಲನು ಮಾರ್ಕನೆನಿಸಿಕೊಳ್ಳುವ ಯೋಹಾನ ಕೊಲೊಸ್ಸೆ ಸಭೆಯ ನಮ್ಮ ಸಹೋದ್ಯೋಗಿ ಎಂದು ಶಿಫಾರಸು ಮಾಡಿದನು. ಪೌಲನು ಕೊನೆಯ ದಿನಗಳಲ್ಲಿ ಮಾರ್ಕನನ್ನು ಸಂಗಡ ಕರೆದುಕೊಂಡು ಬಾ ಅವನು ನನಗೆ ಸೇವೆಗಾಗಿ ಉಪಯುಕ್ತನಾಗಿದ್ದಾನೆ ಎಂದು ತಿಮೋಥಿಗೆ ಹೇಳಿದನು(2 ತಿಮೊ 4:11). ಪೌಲನ ಸೇವೆಯು ಯೌವನಸ್ತ ಬೋಧಕನಿಂದಾಗಿ ಸಮೃದ್ಧಿಗೊಂಡಿತು. ಅವನನ್ನು ಪೌಲನು ಕ್ಷಮಿಸಿದನು. ಅದರ ಮಧ್ಯದಲ್ಲಿ ಇದ್ದ ಅಡೆತಡೆಗಳು ತೆಗೆದು ಹಾಕಲ್ಪಟ್ಟಿದ್ದರಿಂದ ಅವರು ಜೊತೆಗೂಡಿ ಸುವಾರ್ತಾ ಸೇವೆ ಮಾಡಿದರು ಅವರ ಮಧ್ಯೆ ಯಿದ್ದ ಸಮಸ್ಯೆಗಳು ಮತ್ತು ಮಾರ್ಕನೆನಸಿಕೊಳ್ಳುವ ಯೋಹಾನನ ಬಗ್ಗೆ ಇದ್ದ ಅಭಿಪ್ರಾಯವನೆಲ್ಲ ಪೌಲನು ಹಿಂದಕ್ಕೆ ಬಿಟ್ಟನು.

**ನಮ್ಮನ್ನು ನೋಯಿಸಿದ ಅಥವಾ ನಮ್ಮನ್ನು ನಿರಾಸೆಗೊಳಿಸಿದವರನ್ನು ಕ್ಷಮಿಸುವದನ್ನು ಹೇಗೆ ಕಲಿಯುಬೇಕು? ಅದೇ ಸಮಯದಲ್ಲಿ ಹಿಂದಿನ ಸಂಬಂಧವನ್ನು ಯಾಕೆ ಕ್ಷಮಾಪಣೆಯೂ ಸಂಪೂರ್ಣವಾಗಿ ಪುನಃಸ್ಥಾಪಿಸುವುದಿಲ್ಲ? ಅದು ಯಾಕೆ ಯಾವಾಗಲೂ ಆಗುವುದಿಲ್ಲ?**

**ಸೋಮವಾರ** **ಡಿಸೆಂಬರ್** 3

**ದಾಸನು ಮಗನಾದ**

ಪೌಲನು ರೋಮಾಪುರದಲ್ಲಿ ಸೆರೆಮನೆಯಲ್ಲಿದ್ದಾಗ ಅವನು ಒಬ್ಬ ಓಡಿಹೋದ ಓನೇಸಿಮನೆಂಬ ದಾಸನನ್ನು ಭೇಟಿಯಾದನು. ಅವನು ಕೊಲೊಸ್ಸೆಯಾದಿಂದ ರೋಮಿಗೆ ಬಂದಿದ್ದ ಓನೇಸಮನ ಯಜಮಾನನು ವೈಯಕ್ತಿಕವಾಗಿ ಪೌಲನು ಬಲ್ಲವನಾಗಿದ್ದನು.

ಫಿಲೆಮೋನನಿಗೆ ಬರೆದ ಪತ್ರದಲ್ಲಿ ಪೌಲನು ವೈಯಕ್ತಿಕವಾಗಿ ದಾಸನ ಜೊತೆ ಸಂಬಂಧವನ್ನು ಪುನಃಸ್ಥಾಪಿಸು ಎಂದು ತನ್ನ ಸ್ನೇಹಿತನಿಗೆ ಬೇಡಿಕೊಳ್ಳುತ್ತಾನೆ.

ಪೌಲನಿಗೆ ಸಂಬಂಧಗಳು ಮಹತ್ವದವುಗಳಾಗಿದ್ದವು. ಮುರಿದು ಹೋದ ಸಂಬಂಧಗಳು ಸಭೆಯ ಐಕ್ಯತೆಗೆ ಮಾತ್ರ ಆತ್ಮೀಕ ಬೆಳವಣಿಗೆಗೆ ಅಪಾಯಕಾರಿಯಾಗಿದ್ದವು. ಫಿಲೆಮೋನನು ಕೊಲೊಸ್ಸೆಯ ಸಭೆಯ ನಾಯಕನಾಗಿದ್ದನು, ಓನೇಸಿಮನನ್ನು ನಿರಾಶ್ರಿತನನ್ನಾಗಿ ಮಾಡಿದರೆ ಅದು ನಿನ್ನ ಕ್ರೈಸ್ತಿಯ ಸಾಕ್ಷಿ ಸಭೆಯ ಸಾಕ್ಷಿಯ ಬಗ್ಗೆ. ಅಪನಂಬಿಗಸ್ತರಲ್ಲಿ ತಪ್ಪು ಕಲ್ಪನೆ ಮೂಡಿಸುತ್ತದೆ ಎಂದು ಪೌಲನು ತನ್ನ ಸ್ನೇಹಿತನಿಗೆ ಬರೆದಿದ್ದನು.

**ಫಿಲೆಮೋನ 1:25 ಓದಿರಿ: ಪುನಃಸ್ಥಾಪಿತ ಸಂಬಂಧಗಳ ಬಗ್ಗೆ ಯಾವ ಮುಖ್ಯವಾದ ತತ್ವಗಳನ್ನು ನಾವು ಇಲ್ಲಿ ನೋಡುತ್ತೇವೆ? ಜ್ಞಾಪಕವಿರಲಿ ಮುಖ್ಯವಾದ ಪದ ತತ್ವಗಳು.**

______________________________________________

______________________________________________

______________________________________________

ಮೊದಲ ಪೌಲನು ದಾಸತ್ವದ ಕಟ್ಟದ್ದರ ಬಗ್ಗೆ ಮಾತನಾಡದಿರುವದು ಆಶ್ಚರ್ಯ ಮೂಡಿಸುತ್ತದೆ. ಆದರೆ ಪೌಲನು ನೀತಿಯು ಪ್ರಭಾವ ಬೀರಿತು. ಅಪೊಸ್ತಲನು ಓನೇಮನನ್ನು ಹಿಂದಕ್ಕೆ ಫಿಲೆಮೋನನಲ್ಲಿಗೆ ಕಳಿಸುತ್ತಾನೆ. ದಾಸನಾಗಿ ಅಲ್ಲ ಕ್ರಿಸ್ತನಲ್ಲಿ ಅವನ ಮಗನಾಗಿ ಮತ್ತು ಫಿಲೆಮೋನನಿಗೆ ಕರ್ತನಲ್ಲಿ ಪ್ರಿಯ ಸಹೋದರನಾಗಿ ಕಳುಹಿಸಿದನು(ಫಿಲೆಮೋನ 16) ಓಡಿಹೋದ ದಾಸನ ಭವಿಷ್ಯವು ಕರಾಳವಾದ ಮತ್ತು ಭರವಸೆ ಇಲ್ಲದ್ದಾಗಿತ್ತು ಎಂಬುದು ಪೌಲನಿಗೆ ತಿಳಿದಿತ್ತು. ಯಾವಾಗಲೂ ಭಯಭೀತರಾಗಿದ್ದರು, ಅವರದು ನಿರಾಶ್ರಿತ ಮತ್ತು ಬಡತನದ ಜೀವನವಾಗಿತ್ತು ಆದರೆ ಈಗ ಫಿಲೆಮೋನನಿಗೆ ಕ್ರಿಸ್ತನಲ್ಲಿ ಸಹೋದರನಾಗಿ ಓನೇಸಿಮನಿಗೆ ಒಳ್ಳೇಯ ಭವಿಷ್ಯವಿದೆ. ಫಿಲೆಮೋನನಲ್ಲಿ ಅವನ ಆಹಾರ, ವಾಸಸ್ಥಳ ಮತ್ತು ಕೆಲಸದ ಭದ್ರತೆ ಸಿಕ್ಕಿತು. ಒಡೆದು ಹೋದ ಸಂಬಂಧಗಳ ಪುನಃಸ್ಥಾಪನೆಯು ಅವನ ಜೀವನದಲ್ಲಿ ಬದಲಾವಣೆಯನ್ನು ತಂದಿತು. ಅವನು ನಂಬಿಕೆಯ ಮತ್ತು ಪ್ರಿಯ ಸಹೋದರನಾದ ಮತ್ತು ಪೌಲನೊಂದಿಗೆ ಸುವಾರ್ತಾ ಸೇವೆಯಲ್ಲಿ ಭಾಗಿಯಾದ. ಪೌಲನು ಅವರಲ್ಲಿ ಮರುಮೈತ್ರಿಯನ್ನು ತರುವ ಉತ್ಸಾಹವುಳ್ಳ ಬಯಕೆಯುಳ್ಳವನಾದನು. ಅವರಲ್ಲಿ ಮರುಮೈತ್ರಿಗಾಗಿ ಅವನು ತನ್ನ ಹಣವನ್ನು ಕೊಟ್ಟು ಅವರಲ್ಲಿ ಯಾವುದಾದರೂ

ಆರ್ಥಿಕ ಸಮಸ್ಯೆ ಯೇಸುವನ್ನು ನಂಬುವವರಲ್ಲಿ ಇದ್ದರೆ ಅದನ್ನು ಬಗೆಹರಿಸಲು ಸಿದ್ದನಾಗಿದ್ದನು.

**ನೀವು ಇಲ್ಲಿ ನೋಡಿರುವ ಸುವಾರ್ತಾ ತತ್ವಗಳಿಂದ ತಿಳಿದುಕೊಂಡು, ಬೇರೆಯವರಲ್ಲಿ ನಿಮ್ಮ ಸಂಬಂಧಗಳಿಗೆ ಯಾವುದೆ ಒತ್ತಡ ಮತ್ತು ನೋವು ಉಂಟಾಗಿದ್ದಲ್ಲಿ ಅಥವಾ ಒಡಕು ಮೂಡಿದಲ್ಲಿ ಇದನ್ನು ಬಗೆಹರಿಸಲು ಸಹಾಯಕವಾಗುವಂತದ್ದು ತತ್ವಗಳಿಂದ ಏನನ್ನು ತೆಗೆದುಕೊಳ್ಳುವಿರಿ? ಈ ತತ್ವಗಳು ಸ್ಥಳಿಯ ಸಭೆಯ ಐಕ್ಯತೆಯಲ್ಲಿ ಒಡಕು ಮೂಡಿದಂತೆ ಹೇಗೆ ತಡೆಯುವುದು?**

**ಮಂಗಳವಾರ** **ಡಿಸೆಂಬರ್ 4**

**ಐಕ್ಯತೆಗೆ ಆತ್ಮನ ವರಗಳು**

ಹಿಂದಿನ ಪಾಠದಲ್ಲಿ ನಾವು ನೋಡಿದಂತೆ ಕೊರಿಂಥದ ಸಭೆಯಲ್ಲಿ ಅಗಾಧವಾದ ಸಮಸ್ಯೆಗಳನ್ನು ಎದುರಿಸುತ್ತಿತ್ತು.. 1ಕೊರಿಂಥ 3:5–11, 12:1–11 ಮತ್ತು 2ಕೊರಿಂಥ 10:12–15ರಲ್ಲಿ ಸಭೆಯ ಐಕ್ಯತೆಗೆ ಅತಿ ಮಹತ್ವದವುಗಳಾದ ಸಂಬಂಧಗಳ ಪುನಃಸ್ಥಾಪನೆ ಮತ್ತು ಆರೋಗ್ಯಕರ ಸಂಬಂಧಗಳಿಗೆ ಯಾವ ತತ್ವಗಳನ್ನು ಪೌಲನು ತಿಳಿಸುತ್ತಾನೆ.

——————————————————————————————

——————————————————————————————

——————————————————————————————

ಈ ವಾಕ್ಯವೃಂದಗಳಲ್ಲಿ ಅಪೋಸ್ತಲನು ಸಭೆಯ ಐಕ್ಯತೆಗೆ ಅತಿ ಮುಖ್ಯವಾದ ತತ್ವಗಳನ್ನು ತಿಳಿಸುತ್ಥನೆ. ಯೇಸುವು ಬೇರೆ ಬೇರೆ ಕೆಲಸಗಾರರನ್ನು ಸಭೆಯಲ್ಲಿ ಬೇರೆ ಬೇರೆ ಸೇವೆ ಮಾಡಲು ಉಪಯೋಗಿಸುತ್ತಾನೆ ಪ್ರತಿಯೊಬ್ಬರು ಜೊತೆಗೂಡಿ ದೇವರ ರಾಜ್ಯವನ್ನು ಕಟ್ಟುವುದಕ್ಕೆ ಶ್ರಮಿಸುತ್ತಾರೆ ಎಂದು ಪೌಲನು ಸೂಚಿಸುತ್ತಾನೆ(1ಕೊರಿಂಥ 3:9).

ದೇವರು ನಮ್ಮನ್ನು ಸಹಕರಿಸಲು ಕರೆ ನೀಡಿದ್ದಾನೆ ಪೈಪೋಟಿಗಲ್ಲ, ಸುವಾರ್ತೆ ಸೇವೆಗಾಗಿ ದೇವರು ತನ್ನ ಪ್ರತಿಯೊಬ್ಬ ನಂಬಿಗಸ್ತನಿಗೆ ಕ್ರಿಸ್ತನ ಸುವಾರ್ತೆ ಸೇವೆಯಲ್ಲಿ ಸಹಕರಿಸಲು ಮತ್ತು ಸಮುದಾಯ ಸೇವೆ ಮಾಡಲು ವರಗಳನ್ನು ಕೊಟ್ಟಿದ್ದಾನೆ (1 ಕೊರಿಂಥ 12:11) ಆ ವರಗಳು ಹೆಚ್ಚಿನವು ಅಥವ ಕಡಿಮೆಯವು ಅಲ್ಲ ಕ್ರಿಸ್ತನ ಸಭೆಯಲ್ಲಿ ಎಲ್ಲಾ ಅಗತ್ಯವಾದವು(1 ಕೊರಿಂಥ 12: 18–23). ನಮ್ಮ ದೇವರು ಕೊಟ್ಟ

ವರಗಳು ಸ್ವಾರ್ಥವನ್ನು ತೋರಿಸುವುದಕಲ್ಲ. ಆ ವರಗಳನ್ನು ಸುವಾರ್ತೆಯನ್ನು ಸಾರುವುದಕ್ಕೆ ಪವಿತ್ರಾತ್ಮನು ಕೊಟ್ಟಿದ್ದಾನೆ.

ಬೇರೆಯವರೊಂದಿಗೆ ಹೋಲಿಕೆ ಮಾಡುವದು ಅವಿವೇಕತನ. ಏಕೆಂದರೆ ಅವು ನಮ್ಮನ್ನು ಎದೆಗುಂದಿಸುತ್ತವೆ ಅಥವಾ ಗರ್ವಿಷ್ಟರನ್ನಾಗಿ ಮಾಡುತ್ತದೆ. ಬೇರೆಯವರು ನಮಗಿಂತ ಹೆಚ್ಚಿನವರು ಎಂದು ತಿಳಿದುಕೊಂಡರೆ ನಮಗೆ ನಿರಾಸೆಯಾಗುತ್ತದೆ. ನಾವು ಬೇರೆಯವರಿಗೆ ನಮ್ಮನ್ನು ಹೋಲಿಸಿಕೊಂಡರೆ ಸಹಜವಾಗಿ ಯಾವುದೇ ಸೇವೆಯಲ್ಲಿ ನಾವು ಎದೆಗುಂಡುತ್ತೇವೆ, ಮತ್ತೊಂದು ಕಡೆ ನಾವು ನಮ್ಮ ಕೆಲಸ ಬೇರೆಯವರಗಿಂಥ ಹೆಚ್ಚಿನದು ಎಂದು ತಿಳಿದುಕೊಂಡರೆ ನಮ್ಮಲ್ಲಿ ಗರ್ವ ಹೆಚ್ಚುತ್ತದೆ.

ಈ ಎರಡು ಭಾವನೆಗಳು ಕ್ರಿಸ್ತನಿಗೆ ನಾವು ಮಾಡುವ ಸೇವೆಯನ್ನು ಮತ್ತು ಬೇರೆಯವರೊಂದಿಗಿನ ನಮ್ಮ ಅನ್ಯೊನ್ಯತೆಯನ್ನು ಕುಟಿಂತಗೊಳಿಸುತ್ತದೆ. ಕ್ರಿಸ್ತನ ಪ್ರಭಾವದಲ್ಲಿ ನಾವು ಸೇವೆ ಸಲ್ಲಿಸುತ್ತಿರುವಾಗ ನಾವು ಸಂತಸ ಮತ್ತು ತೃಪ್ತಿಯನ್ನು ಕ್ರಿಸ್ತನ ಸಾಕ್ಷಿಯಲ್ಲಿ ಕಾಣುತ್ತೇವೆ. ನಮ್ಮ ಕೆಲಸವು ಮತ್ತು ಸಭೀಕರ ಪ್ರಯತ್ನಗಳು ಮತ್ತು ಕ್ರಿಸ್ತನ ಸಭೆಯು ದೇವರ ರಾಜ್ಯವು ಅಸಾಧಾರಣಾ ಪ್ರಗತಿಯಾಗುವಂತೆ ಮಾಡುತ್ತದೆ.

**ಬೇರೆಯವರಲ್ಲಿದ್ದ ಸುವಾರ್ತೆ ಸೇವೆಯ ವರಗಳು ನಿಮ್ಮಲ್ಲಿ ಅಸೂಯೆ ಹುಟ್ಟಿಸಿದ್ದನ್ನು ಜ್ಞಾಪಿಸಿಕೊಳ್ಳಿ. ಅದೇ ಸಮಯದಲ್ಲಿ ನಿಮ್ಮಲ್ಲಿ ಇರುವ ವರಗಳಿಂದಾಗಿ ನೀವು ನಿಮ್ಮನ್ನು ಬೇರೆಯವರಿಗೆ ಹೊಲಿಸಿಕೊಂಡು ಎಷ್ಟು ಸಲ ಗರ್ವ ಪಟ್ಟಿದ್ದೀರಿ? ಮಾನವನ ಈ ಸ್ವಭಾವಗಳನ್ನು ಅಳವಡಿಸಿಕೊಳ್ಳುವುದನ್ನು ಹೇಗೆ ಕಲಿಯಬೇಕು?**

**ಬುಧವಾರ** **ಡಿಸೆಂಬರ್ 5**

**ಕ್ಷಮಾಪಣೆ**

ಕ್ಷಮಾಪಣೆ ಎಂದರೇನು? ಕ್ಷಮಾಪಣೆಯು ನಮಗೆ ಘೋರವಾಧ ತಪ್ಪು ಮಾಡಿದವನ ಪಶ್ಚಾತ್ತಾಪದ ಮೇಲೆ ನನ್ನ ಕ್ಷಮಾಪಣೆ ಆಧಾರವಾಗಿದೆಯೇ? ನನಗೆ ತಪ್ಪು ಮಾಡಿದವನು ನನ್ನ ಕ್ಷಮಾಪಣೆಗೆ ಅರ್ಹನಲ್ಲದಿದ್ದರೆ?

**ರೋಮಾ 5:8–11, ಲೂಕ 23:31–34, 2ಕೊರಿಂಥ 5:20,21; ಎಫೆ 4:26ಗಳಲ್ಲಿ ಇರುವ ವಾಕ್ಯವೃಂದ ಸತ್ಯವೇದದ ಪ್ರಕಾರ ಕ್ಷಮಾಪಣೆ ಎಂದರೇನು ಎಂಬುದನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗುತ್ತದೆ?**

________________________________________

ಕ್ರಿಸ್ತನು ನಮ್ಮನ್ನು ಆತನೊಂದಿಗೆ ಮರುಮೈತ್ರಿಯಾಗಲು ಮೊದಲು ಆತನು ಮುಂದೆ ಬಂದನು. ದೇವರ ಒಳ್ಳೇನವು ನಮ್ಮನ್ನು ಪಶ್ಚಾತ್ತಾಪದತ್ತ ನಡೆಸುತ್ತದೆ(ರೋಮಾ 2:4). ನಾವು ಪಾಪಿಗಳಾಗಿದ್ದಾಗ್ಯು ದೇವರೊಂದಿಗೆ ಕ್ರಿಸ್ತನ ಮೂಲಕ ಮರುಮೈತ್ರಿ ಮಾಡಿಕೊಂಡಿದ್ದೇವೆ. ನಮ್ಮ ಪಶ್ಚಾತಾಪ ಮತ್ತು ಪಾಪಿ ನಿವೇದನೆಯು ಮರುಮೈತ್ರಿಯನ್ನು ಹುಟ್ಟಿಸುವುದಿಲ್ಲ. ಆದರೆ ಕ್ರಿಸ್ತನ ಶಿಲುಬೆಯಲ್ಲಿ ತನ್ನ ಪ್ರಾಣವನ್ನು ನಮಗೋಸ್ಕರ ಕೊಟ್ಟಿದ್ದು ಮರುಮೈತ್ರಿಯನ್ನು ಹುಟ್ಟಿಸುತ್ತದೆ. ನಮಗೋಸ್ಕರ ಏನನ್ನು ಮಾಡಲಾಗಿದೆಯೋ ಅದನ್ನು ನಾವು ಸ್ವೀಕರಿಸಬೇಕು.

ಇದು ಸತ್ಯ ನಮ್ಮ ಪಾಪಗಳನ್ನು ನಿವೇದನೆ ಮಾಡುವವರೆಗೂ ನಾವು ಕ್ಷಮಾಪಣೆಯು ಆಶೀರ್ವಾದಗಳನ್ನು ಪಡೆಯಲು ಸಾಧ್ಯವಿಲ್ಲ. ನಮ್ಮ ಪಾಪ ನಿವೇದನೆಯು ದೇವರ ಮನಸ್ಸಿನಲ್ಲಿ ಕ್ಷಮಾಪಣೆಯನ್ನು ಹುಟ್ಟಿಸುತ್ತದೆ ಎಂದು ಅರ್ಥವಲ್ಲ. ಯಾವಾಗಲು ದೇವರ ಮನಸ್ಸಿನಲ್ಲಿ ಕ್ಷಮಾಪಣೆ ಎನ್ನುವುದು ಇತ್ತು ನಿವೇದನೆಯು ಅದನ್ನು ಪಡೆದುಕೊಳ್ಳುವಂತೆ ಅನುವು ಮಾಡಿಕೊಡುತ್ತದೆ. ನಿವೇದನೆಯು ಪ್ರಾಮುಖ್ಯವಾದದು. ನಮ್ಮ ಮೇಲಿನ ದೇವರ ಭಾವನೆಗಳನ್ನು ಬದಲಾಯಿಸುತ್ತದೆ ಎಂಬ ಕಾರಣಕ್ಕೆ ಅಲ್ಲ ಆದರೆ ದೇವರ ಮೇಲಿನ ನಮ್ಮ ಭಾವನೆಯನ್ನು ಬದಲಾಯಿಸುತ್ತದೆ. ಪವಿತ್ರಾತ್ಮನ ಬಲದಿಂದ ನಾವು ಪಶ್ಚಾತ್ತಾಪದಿಂದ ಪಾಪಗಳ ನಿವೇದನೆ ಮಾಡಲು ಶರಣಾದರೆ, ಹಾಗಾದರೆ ನಾವು ಬದಲಾಗಿದ್ದೇವೆ ಎಂಬ ಅರ್ಥ. ಆತ್ಮೀಕ ಒಳತಿಗಾಗಿ ಕ್ಷಮಾಪಣೆ ಅತ್ಯಗತ್ಯ. ನಮಗೆ ತಪ್ಪು ಮಾಡಿದವರನ್ನು ಕ್ಷಮಾಪಣೆಗೆ ಅರ್ಹರಲ್ಲದಿದ್ದರೂ ನಾವು ಅವರನ್ನು ಕ್ಷಮಿಸುವದರಲ್ಲಿ ವಿಫಲವಾದರೆ ಅವರಿಗಿಂತ ನಮಗೆ ಹೆಚ್ಚು ನೋವುಂಟು ಮಾಡುತ್ತದೆ. ಒಬ್ಬ ವ್ಯಕ್ತಿಯು ನಮಗೆ ತಪ್ಪುಮಾಡಿದ್ದಲ್ಲಿ ನಾವು ಅವರನ್ನು ಕ್ಷಮಿಸುವಲ್ಲಿ ವಿಫಲವಾದರೆ ನಮ್ಮೊಳಗಿನ ನೋವು ಕಾಡಿಸುತ್ತದೆ, ಇದರಿಂದ ಅವರಿಗೆ ನಮ್ಮನ್ನು ನೋಯಿಸುವಂತೆ ಅವಕಾಶ ಮಾಡಿಕೊಡುತ್ತಿದ್ದೇವೆ. ಇಂಥ ಮನೋಭಾವ ಮತ್ತು ನೋವುಗಳು ಎಷ್ಟು ಸಲ ಸಭೆಯು ಒಡೆದು ಹೋಗುವದಕ್ಕೆ ಕಾರಣವಾಗಿವೆ. ಸಭಿಕರಲ್ಲಿ ಇಂಥ ನೋವುಗಳು ಕ್ರಿಸ್ತನ ದೇಹವೆಂಬ ಸಭೆಯ ಐಕ್ಯತೆಗೆ ನೋವು ತಂದಿದೆ. ಕ್ರಿಸ್ತನು ತನ್ನ ಖಂಡನೆಯಿಂದ ನಮಗೆ ಬಿಡುಗಡೆ ನೀಡಿರುವದರಿಂದ ಕ್ಷಮಾಪಣೆಯು ನಮ್ಮ ಖಂಡನೆಯಿಂದ ಬೇರೆಯವರೂ ಬಿಡುಗಡೆ ಹೊಂದುತ್ತಾರೆ. ಅದು ಅವರು ನಮ್ಮೊಂದಿಗಿನ ನಡೆತೆಯನ್ನು ನ್ಯಾಯವೆಂದು ಸಮರ್ಥಿಸುವುದಿಲ್ಲ. ಯೇಸುವಿಗೆ ನಾವು ತಪ್ಪು ಮಾಡಿದ್ದೇವೆ ಆದರೂ ಆತನು ನಮ್ಮೊಂದಿಗೆ ಮರುಮೈತ್ರಿ ಮಾಡಿಕೊಂಡಿರುವದರಿಂದ ನಮಗೆ ತಪ್ಪಾದವರೊಂದಿಗೆ ನಾವು ಮರುಮೈತ್ರಿ ಮಾಡಿಕೊಳ್ಳಬೇಕು ನಾವು ಕ್ಷಮಿಸಲ್ಪಟ್ಟಿರುವುದರಿಂದ ನಾವು ಸಹ ಕ್ಷಮಿಸಬೇಕು. ಬೇರೆಯವರ ಕ್ರಿಯ ಮತ್ತು ನಡೆತೆಯನ್ನು ನಾವು ಕ್ಷಮಿಸಲು ಆಯ್ಕೆ ಮಾಡಿಕೊಳ್ಳಬೇಕು.

**ಕ್ರಿಸ್ತನಲ್ಲಿರುವ ಕ್ಷಮಾಪಣೆಯನ್ನು ದೃಷ್ಟಿಸುತ್ತಾ ಬೇರೆಯುವರನ್ನು ಕ್ಷಮಿಸಲು ನಾವು ಕಲಿಯುವಂತೆ ಹೇಗೆ ಸಾಹಾಕವಾಗುತ್ತದೆ. ಕ್ರೈಸ್ತರ ಅನುಭವದಲ್ಲಿ ಈ ಕ್ಷಮಾಪಣೆ ಎಂಬುದು ಏಕೆ ಅಗತ್ಯವಾದದ್ದು?**

**ಗುರುವಾರ** **ಡಿಸೆಂಬರ್ 6**

**ಪುನಃಸ್ಥಾಪನೆ ಮತ್ತು ಐಕ್ಯತೆ**

**ಮತ್ತಾಯ 18:15–17 ಓದಿರಿ, ಸಭೆಯ ಮತ್ತೊಬ್ಬ ಸಭಿಕನು ನಮಗೆ ತಪ್ಪು ಮಾಡಿದಾಗ ಆ ವಿವಾದವನ್ನು ಬಗೆಹರಿಸಲು ಸಹಾಯಕವಾಗುವಂತೆ ಯಾವ ಮೂರು ಕ್ರಮಗಳನ್ನು ಯೇಸು ನಮಗೆ ಕೊಟ್ಟನು. ಈಗಿನ ಪರಿಸ್ಥಿತಿಯಲ್ಲಿ ಅವುಗಳನ್ನು ಹೇಗೆ ನಾವು ಅಳವಡಿಸಿಕೊಳ್ಳಬೇಕು.**

________________________________________________

________________________________________________

________________________________________________

ಮತ್ತಾಯ 18ರಲ್ಲಿ ನಿಮ್ಮ ವೈಯಕ್ತಿಕ ವಿವಾದಗಳನ್ನು ಸಾಧ್ಯವಾದಷ್ಟು ನಿಮ್ಮೊಳಗೆ ಸಬೆಯಲ್ಲಿ ಬಗೆಹರಿಸಿಕೊಳ್ಳಿರಿ ಎಂದು ಯೇಸು ಹೇಳಲು ಇಚ್ಚಿಸಿದನು. ಒಂದು ವೇಳೆ ಇಬ್ಬರು ಸಮಸ್ಯೆಯಲ್ಲಿ ಒಳಗೊಡಿದ್ದಲ್ಲಿ ಅವರಿಬ್ಬರೇ ಆ ಸಮಸ್ಯೆಯನ್ನು ಬಗೆಹರಿಸಿ ಕೊಳ್ಳಬೇಕು. ಆದುದರಿಂದಲೇ ಯೇಸು ಹೇಳುತ್ತಾನೆ. ಇಬ್ಬರ ನಡುವಿನ ವಿವಾದದಲ್ಲಿ ಹೆಚ್ಚು ಒಳಗೊಂಡರೆ ಅದು ಉಲ್ಬನೆಗೊಳ್ಳುತ್ತದೆ. ಆದು ನಂಬಿಗಸ್ತರ ಅನ್ಯೋನ್ಯತೆಯ ಮೇಲೆ ಪರಿಣಾಮ ಬೀರುತ್ತದೆ. ಜನರು ಗುಂಪು ಗುಂಪಾಗಿ ಜಗಳಕ್ಕೆ ಎಡೆಮಾಡಿಕೊಡುತ್ತದೆ. ಕ್ರೈಸ್ತೀಯ ಪ್ರೀತಿಯ ಮೂಲಕ ಮತ್ತು ಪರಸ್ಪರ ಅರ್ಥ–ರ್ಮಾಡಿಕೊಳ್ಳುವ ಮೂಲಕ ಇಬ್ಬರು ನಡುವಿನ ಭಿನ್ನಾಭಿಪ್ರಾಯಗಳು. ಬಗೆಹರಿಸಿದರೆ ಅದು ಮರುಮೈತ್ರಿಯ ವಾತಾವರಣವನ್ನು ಸೃಷ್ಟಿ ಮಾಡುತ್ತದೆ ಇಂಥ ವಾತಾವರಣವು ವಿವಾದಗಳು ಬಗೆಹರಿಸಲು ಸಹಾಯಕನಾಗುವಂತೆ ಅನುವು ಮಾಡಿಕೊಡುತ್ತದೆ.

ಕೆಲವೊಮ್ಮೆ ವೈಯುಕ್ತಿಕವಾದ ಮನವಿಯ ವಿವಾದಗಳನ್ನು ಬಗೆಹರಿಸಲು ಪರಿಣಾಮಕಾರಿಯಾಗುವುದಿಲ್ಲ ಹಾಗಾಗಿ ಇನ್ನೊಬ್ಬರನ್ನು ಕರೆದುಕೊಂಡು ಬಗೆ ಹರಿಸಿಕೊಳ್ಳಿ ಎಂದು ಯೇಸು ಹೇಳುತ್ತಾನೆ.

ಇದರ ಉದ್ದೇಶವು ಎಲ್ಲರನ್ನು ಬೇರೆ ಮಾಡಿದೆ ಒಂದುಗೂಡಿಸುವುದಾಗಿದೆ. ಅವರು ಕ್ರೈಸ್ತೀಯ ಪ್ರೀತಿ ಮತ್ತು ಅನುಕಂಪದಿಂದ ಸಲಹೆಗಾರರಾಗಿ ಪ್ರಾರ್ಥನೆಯಲ್ಲಿ ಒಂದಾಗಿ ಬೇರೆಯಾದ ಇಬ್ಬರನ್ನು ಒಂದುಗೂಡಿಸುವದಕ್ಕೆ ಕಾರ್ಯದಲ್ಲಿ

ಭಾಗವಹಿಸುತ್ತಾರೆ. ಕೆಲವು ಸಂದರ್ಭಗಳಲ್ಲಿ ಸಮಸ್ಯೆಯನ್ನು ಬಗೆಹರಿಸಲು ಮಾಡದ ಪ್ರಯತ್ನಗಳು ವಿಫಲವಾಗುತ್ತವೆ. ಹಾಗಾದಾಗ ಸಮಸ್ಯೆಯನ್ನು ಸಭೆಗೆ ತರಬೇಕು ಎಂದು ಯೇಸು ಹೇಳುತ್ತಾನೆ. ಸಬ್ಬತ್ತಿನ ಮುಂಜಾನೆಯ ಆರಾಧನೆಯನ್ನು ಅಡ್ಡಿಪಡಿಸುವದಕ್ಕಾಗಿ ತಮ್ಮ ವೈಯಕ್ತಿಕ ಸಮಸ್ಯೆಗಳನ್ನು ಸಭೆಗೆ ತರುವುದಿಲ್ಲ ಎಂದು ಯೇಸು ಹೇಳುತ್ತಾನೆ. ಒಂದು ವೇಳೆ ಈ ಎರಡು ಹಂತಗಳಲ್ಲಿ ಸಮಸ್ಯೆ ಬಗೆಹರಿಯದಿದ್ದರೆ ಸಭೆಯ ಮಂಡಳಿಗೆ ತರಬೇಕು. ಮರುಮೈತ್ರಿ ಮಾಡುವುದೇ ಕ್ರಿಸ್ತನ ಉದ್ದೇಶವಾಗಿದೆ. ಒಬ್ಬರನ್ನು ದೂಷಿಸಿ ಇನ್ನೊಬ್ಬರನ್ನು ದೋಷಿಸದೇ ಇರುವದಲ್ಲಿ ನಿಮ್ಮ ಸಿಟ್ಟು ದ್ವೇಷಕ್ಕೆ ಕಾರಣವಾಗದಿರಲಿ. ನಿಮಗಾದ ನೋವುಗಳು ವಿಷದ ಮಾತುಗಳು ಬರದಂತೆ ತಡೆಯಿರಿ. ಅವುಗಳನ್ನು ಕೇಳುವವರ ಮನದಲ್ಲಿ ದೋಷಿಗಳೆಂದು ಅಂದುಕೊಳ್ಳುತ್ತಾರೆ. ಅವರ ಮತ್ತು ನಿಮ್ಮ ಕಹಿ ಆಲೋಚನೆಗಳು ಬಾರದಂತೆ ನೋಡಿಕೊಳ್ಳಿ. ನಿನ್ನ ಸಹೋದರನ ಬಳಿಗೆ ನಮ್ರತೆ ಮತ್ತು ಪ್ರಾಮಾಣಿಕತೆಯಿಂದ ಹೋಗಿ ವಿಷಯದ ಬಗ್ಗೆ ಮಾತನಾಡಿರಿ ಎಲ್ಲೆನ್ ಜಿ ವೈಟ್, ಗಾಸ್ಪಲ್ ವರ್ಕರ್ಸ್. ಪು 499.

**ಶುಕ್ರವಾರ** **ಡಿಸೆಂಬರ್ 7**

**ಹೆಚ್ಚಿನ ಚಿಂತನೆಗಾಗಿ: ಎಲ್ಲೆನ್ ಜಿ ವೈಟ್‌ಮ್ಮನ ಎನ್‌ಸೈಕ್ಲೊಪಿಡಿಯಾ ಪು. 825, 826ಧ "ಫರ್ಗೀವ್‌ನೆಸ್" ಎಂಬ ಲೇಖನವನ್ನು ಓದಿರಿ.**

ಕೆಲಸಗಾರರ ಮನದಲ್ಲಿ ಕ್ರಿಸ್ತನ ನೆಲಗೊಂಡಿದ್ದರೆ ಸ್ವಾರ್ಥ ಎಂಬುದು ವಾಯುವಾಗುತ್ತದೆ. ಪ್ರತಿಸ್ಪರ್ಥೆಯು, ಅಧಿಕಾರಕ್ಕಾಗಿ ಕಲಹ ಇರುವುದಿಲ್ಲ. ಅವರು ಪವಿತ್ರವಾದಾಗ ಉಂಟಾಗುವದು. ಒಬ್ಬರ ಮೇಲೊಬ್ಬರಿಗೆ ಪ್ರೀತಿ ಹೆಚ್ಚುತ್ತದೆ. ಅದನ್ನು ನಾವು ಎಲ್ಲರಲ್ಲೂ ಕಾನಬಹುದು ಮತ್ತು ಅನುಭವವಾಗುವದು ಪವಿತ್ರಾತ್ಮನ ಕೃಪೆಯು ಅವರ ಮೇಲೆ ಸುರಿಸಲ್ಪಡುವುದು ಇದರಿಂದ ದೇವರ ವಾಗ್ದಾನವು ಸ್ವಲ್ಪವೂ ತಪ್ಪದೆ ನೆರವೇರುತ್ತದೆ, ಎಲ್ಲೆನ್ ಜಿ ವೈಟ್, ಸೆಲೆಕ್ಟಡ್ ಮೆಸೆಜಸ್ – ಪು 175.

ಯೆಹೋವನು ಆ ಮಹಾ ದಿನದಂದು ನಮ್ಮ ದುರ್ಗವು, ಕೋಟೆಯು ಆದ ಕ್ರಿಸ್ತನೊಂದಿಗೆ ನಿಲ್ಲುವದಾದರೆ ನಾವು ಅಸೂಯೆಯನ್ನು ತೆಗೆದು ಹಾಕಬೇಕು. ಅಧಿಕಾರಕ್ಕಾಗಿ ಜಗಳವಾಡಬಾರದು, ಈ ಅಪವಿತ್ರವಾವುಗಳನ್ನು ಮತ್ತೆ ನಮ್ಮ ಜೀವನದಲ್ಲಿ ಮೊಳಕೆ ಒಡೆಯದಂತೆ ಬೇರು ಸಹಿತ ಕಿತ್ತು ಹಾಕಬೇಕು. ನಮ್ಮನ್ನು ನಾವು ಸಂಪೂರ್ಣವಾಗಿ ಯೆಹೋವನಿಗೆ ಒಪ್ಪಿಸಿಕೊಡಬೇಕು. ಎಲ್ಲೆನ್ ಜಿ ವೈಟ್ " ಲಾಸ್ಟ್ ಡೇ ಈವೆಂಟ್ಸ್" ಪು. 190

**ಚರ್ಚೆಯ ಪ್ರಶ್ನೆಗಳು**

1. ಕೊಲೊಸ್ಸೆ 3:12–17 ಓದಿರಿ: ಅಪೊಸ್ತಲ ಪೌಲನು ಕೊಲೊಸ್ಸೆ ಸಭೆಯವರಿಗೆ ಕ್ರೈಸ್ತೀಯ ಗುಣಗಳನ್ನು ಹುಡುಕಲು ಅವರಿಗೆ ಪ್ರೇರೇಪಿಸುತ್ತಾನೆ? ಎಲ್ಲ ವಿವಾದಗಳನ್ನು ನಿರ್ಣಯಿಸಲು ಈ ಗುಣಗಳು ಮೂಲವಾಗಿವೆ? ಮತ್ತಾಯ 18:15–18ರಲ್ಲಿ ಯೇಸು ಕೊಟ್ಟಿರುವ ತತ್ವಗಳಂತೆ ನಡೆಯಲು ಹೇಗೆ ನಮಗೆ ಮಾರ್ಗದರ್ಶನ ನೀಡುತ್ತವೆ.

2. ಕೊಲೊಸ್ಸೆ 3:12–17ರಲ್ಲಿರುವ ವಾಕ್ಯಗಳಲ್ಲಿ ಕಂಡುಬರುವ ಬೋಧನೆಗಳನ್ನು ಮತ್ತೆ ನೋಡೋಣ. ಸಭೆಯ ಐಕ್ಯತೆಗೆ ಇವುಗಳು ಏಕೆ ಅತ್ಯಾಗತ್ಯವಾಗಿವೆ?

3. ನಾವು ನಮ್ಮ ಸವೆಂತ್–ಡೇ–ಅಡ್ವೆಂಟಿಸ್ಟ್ ಸಭೆಯನ್ನು ಒಟ್ಟಾರೆ ನೋಡುವುದಾದರೆ ಈ ಲೋಕಕ್ಕೆ ನಾವು ತಲುಪಲು ಬೇಕಾಗುವ ಐಕ್ಯತೆಯಿಂದ ಇರಲು ಯಾವುದು ತಡೆಯುತ್ತಿದೆ, ಅದು ನಮ್ಮ ಬೋಧನೆ ಮತ್ತು ತತ್ವಗಳಾ? ಅಲ್ಲವೇ ಅಲ್ಲ ದೇವರು ಇವುಗಳನ್ನು ಲೋಕಕ್ಕೆ ಪ್ರಚಾರ ಮಾಡಲು ಕೊಟ್ಟಿದ್ದಾನೆ. ಅಥ–ವಾ ಸಮಸ್ಯೆ ನಮ್ಮಲ್ಲಿ ಇರಬಹುದು, ಅದು ವೈಯುಕ್ತಿಕ ಸಂಬಂಧಗಳು, ಅಸೂಯೆ, ಸ್ವಾರ್ಥ, ಅಧಿಕಾರದ ದಾಹ, ಅದರೊಂದಿಗೆ ಇನ್ನು ಅನೇಕ ಸಮಸ್ಯೆಗಳು ಇವೆ. ಸಂಪೂರ್ಣ ಐಕ್ಯತೆಯು ಸಭೆಯಲ್ಲಿ ಕಾಣಬೇಕೆಂದರೆ ಪವಿತ್ರಾತ್ಮನ ಶಕ್ತಿಯ ಮೂಲಕ ಬದಲಾವಣೆ ನಮ್ಮಲ್ಲಿ ಆಗಲಿ ಎಂದು ಕೇಳಿಕೊಳ್ಳಬೇಕು.

**ಸಾರಾಂಶ**: ಯೇಸುವಿನ ಸುವಾರ್ತೆಯು ಗುಣಪಡಿಸುವುದು ಮತ್ತು ಬದಲಾವಣೆ ಎಂಬುದರ ಬಗೆಯಾಗಿದೆ. ಅವುಗಳು ನಮ್ಮಲ್ಲಿ ಬಂದಾಗ ಬೇರೆಯವವರೊಂದಿಗಿನ ಸಂಬಂಧಗಳ ಮೇಲೆ ಪ್ರಭಾವ ಬೀರುವುದಿಲ್ಲ. ಸತ್ಯವೇದವು ಬಲವಾದ ತತ್ವಗಳನ್ನು ಮತ್ತು ಉದಾರಣೆಗಳನ್ನು ಪಾಪಗಳಿಂದ ಕೂಡಿದ ಲೋಕದಲ್ಲಿ ಬೇರೆಯವರೊಂದಿಗೆ ಒಳ್ಳೇ ಮತ್ತು ಹತ್ತಿರದ ಸಂಬಂಧಗಳನ್ನು ಹೇಗೆ ಮಾಡಬೇಕು ಎಂದು ತಿಳಿಸುತ್ತವೆ.